# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

ಎಸ್‌ಸಿ. 160/2023

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಡಾ.ಚಂದ್ರಶೇಖರ್.ಟಿ.ಎನ್ | ಪ್ರಮಾಣ ಮಾಡಿಸಿದ ದಿನಾಂಕಃ | |
| ತಂದೆ/ಗಂಡನ ಹೆಸರು | ಃ ಶ್ರೀ ಟಿ.ಬಿ.ನಿರಂಜನಮೂರ್ತಿ | 19.08.2024 | |
| ವಯಸ್ಸು | ಃ 57 ವರ್ಷ | | |
| ವೃತ್ತಿ | ಃ ಪ್ರಾಧ್ಯಾಪಕರು, ಮೈಸೂರು ಮೆಡಿಕಲ್ ಕಾಲೇಜ್ | ಪ್ರಾ.ಸಾ. | ಃ 12 |
| ವಾಸಸ್ಥಳ | ಃ ಮೈಸೂರು | ಚಾ.ಸಾ. | ಃ 23 |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ನಾನು *2007* ರಿಂದ ಈ ತನಕ ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ನ್ಯಾಯ ವೈದ್ಯ ಶಾಸ್ತ್ರದ ಮುಖ್ಯಸ್ಥನಾಗಿ ಕೆಲಸ ಮಾಡುತ್ತಿದ್ದೇನೆ. ದಿಃ*14.01.2022* ರಂದು ದೇವರಾಜ ಪೋಲೀಸ್ ಠಾಣೆ ಮಹಿಳಾ ಪಿ.ಎಸ್.ಐ ಇವರ ವಿನಂತಿ ಮೇರೆಗೆ ಮದ್ಯಾಹ್ನ *1* ರಿಂದ *2* ಗಂಟೆ ವೇಳೆಯಲ್ಲಿ ಪ್ರಜ್ವಲ್, *19* ವರ್ಷ ಎನ್ನುವ ವ್ಯಕ್ತಿಯ ಶವದ ಮರಣೋತ್ತರ ಪರೀಕ್ಷೆಯನ್ನು ಕೆ.ಆರ್. ಆಸ್ಪತ್ರೆಯ ಶವಾಗಾರದಲ್ಲಿ ಮಾಡಿದ್ದೆ. ಆ ಶವವು *5* ಅಡಿ *6* ಇಂಚು ಉದ್ದದ್ದು ಇತ್ತು. ಸಾಮಾನ್ಯ ದೃಢಾಕಾಯದ್ದು ಇದ್ದು ಸಂಪೂರ್ಣ ಸೆಟೆದುಕೊಂಡಿತ್ತು. ಮರಣೋತ್ತರ ಕಲೆಯು ದೇಹದ ಹಿಂಭಾಗದಲ್ಲಿತುತ. ಮೆಲ್ನೋಟಕ್ಕೆ ಆ ಶವದ ಮೇಲೆ ಈ ಕೆಳಕಂಡ ಗಾಯಗಳು ಕಂಡುಬಂದಿತ್ತು.

1. Bleeding from the nose present.

2. Both bones of left fore arm are fractured and dislocated as their middle with effusion of blood.

3. Both bones of left leg are fractured and dislocated at their lower 1/3rd with extravasion of blood

ಆ ದೇಹವನ್ನು ಛೇದಿಸಿ ನೋಡಿದಾಗ ತಲೆ ಬುರುಡೆಯ ಒಳಗೆ ಮೆದುಳಿನಲ್ಲಿ ಸಂಪೂರ್ಣವಾಗಿ ರಕ್ತ ಸ್ರಾವವಾಗಿತ್ತು. ಜಠರದಲ್ಲಿ ಅರ್ಧ ಭಾಗದಷ್ಟು ಅನ್ನದ ಅಂಶ ಇತ್ತು. ಅದು ಹುಳಿ ವಾಸನೆಯಿಂದ ಕೂಡಿತ್ತು. ದೇಹದ ಇತರೆ ಅಂಗಗಳು ಸುಸ್ಥಿತಿಯಲ್ಲಿತ್ತು. ಶವ ಪರೀಕ್ಷೆ ಕಾಲಕ್ಕೆ ರಕ್ತ ಮತ್ತು ವಿಸ್ರಾ ವನ್ನು ಸಂಗ್ರಹಿಸಿ ಆರ್.ಎಫ್.ಎಸ್.ಎಲ್ ಗೆ ಸಂಬದಪಟ್ಟ ಪೋಲೀಸ್ ಅಧಿಕಾರಿಗಳ ಮೂಲಕ ಕಳುಹಿಸಿದ್ದೆ.

***2.*** ದಿಃ***24.03.2022*** ರಂದು ಪೋಲೀಸರು ನ್ಯಾಯ ವಿಜ್ಞಾನ ವರದಿಯನ್ನು ಕೊಟ್ಟು ಅಂತಿಮ ಅಭಿಪ್ರಾಯವನ್ನು ಕೇಳಿದ್ದರು. ನಂತರ ದಿಃ*13.09.2022* ರಂದು ಪ್ರಯೋಗಾಲಯದ ವರದಿಯನ್ನು ಪರಿಶೀಲಿಸಿ ಮೃತನ ಸಾವು ಆತನಿಗೆ ಆಗಿದ್ದ ಗಾಯಗಳಿಂದ ರಕ್ತ ಸ್ರಾವವಾಗಿ ಆಘಾತಕ್ಕೊಳಗಾಗಿ ಮರಣವಾಗಿದೆ ಎಂದು ಗೊತ್ತಾಗಿತ್ತು. ಆ ವ್ಯಕ್ತಿ ಸಾಯುುವ ಮುಂಚೆ ಮೃತನು ಮಧ್ಯಪಾನ ಮಾಡಿದ್ದು ಕಂಡುಬಂದಿತ್ತು. ಮಧ್ಯಪಾನದ ಪ್ರಮಾಣವು *116.20* ***mgs/ 100ml of blood*** ಆಗಿರುತ್ತದೆ. ಈ ಬಗ್ಗೆ ನಾನು ವರದಿ ಕೊಟ್ಟಿದ್ದೇನೆ. ಮೃತನಿಗೆ ಆಗಿದ್ದ ಗಾಯಗಳು ಮರಣಕಿಂತ ಮೊದಲೇ ಆಗಿದ್ದ ಗಾಯಗಳು ಆಗಿವೆ. ಈಗ ನಾನು ನೋಡುತ್ತಿರುವ ಶವ ಪರೀಕ್ಷೆ ವರದಿ ಅದೇ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ವರದಿಯನ್ನು ನಿ.ಪಿ-*24* ಮತ್ತು ಸಹಿಗಳನ್ನು ನಿ.ಪಿ-*24(ಎ)* ಮತ್ತು *(ಬಿ)* ಎಂದು ಗುರುತಿಸಿದೆ. ಕಟ್ಟಡದ ***3*** ನೇ ಮಹಡಿ ಮೇಲಿಂದ ಬಿದ್ದಲ್ಲಿ ಈ ತರಹದ ಗಾಯಗಳು ಮತ್ತು ಸಾವು ಆಗುವ ಸಾಧ್ಯತೆ ಇದೆ.

<u>ಪಾಟೀ ಸವಾಲು : ಆರೋಪಿ ಪರ ವಕೀಲ</u>ರು ಗೈರು ಹಾಜರಿದ್ದು ಆರೋಪಿತರು ಸಮಯ ಕೊರಿದ್ದು ಸೂಕ್ತ ಕಾರಣ ಹೇಳದೇ ಇರುವ ಕಾರಣ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

<u>ಮರು ವಿಚಾರಣೆ:- ಇಲ್ಲ.</u>

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,***
**ಮೈಸೂರು**